5. ಇದ್ಗಾ, ಬಿಸ್ಕೂರು ಗ್ರಾಮ, ಕುದೂರು ಹೋಬಳಿ, ಮಾಗಡಿ ತಾಲ್ಲೂಕು.

ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ

2947:(4051)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವಾಗಿನಿಂದ ಬಾಕಿ ಉಳಿದಿದೆ;

ಆ) ಹಾಗಿದ್ದಲ್ಲಿ ಯಾವಾಗ ವಿದ್ಯುತ್ ಸಂಪರ್ಕಕೊಡಲಾಗುವುದು?

ಇಂಧನ ರಾಜ್ಯ ಸಚಿವರು:

ಅ ಮತ್ತು ಆ) ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸಗಳು ಸ್ವಲ್ಪ ಮಟ್ಟಿಗೆ ಕುಂಠಿತವಾಗಿರುವುದು ಮಂಡಳಿಯ ಗಮನಕ್ಕೆ ಬಂದಿದೆ. ಹಾಲಿ ಹಿರೇಕೆರೂರು ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕುರಿತಂತೆ ವಿವರಗಳು ಕೆಳಕಂಡಂತಿವೆ.

ಬೇಟಕೆಕೂರಿನಲ್ಲಿ - ಕೆಲಸ ಮುಗಿದಿದೆ.

ಅನಜ ಮತ್ತು ಅಡೆವು:- ಈ ಯೋಜನೆಗಳಿಗೆ ಡಿಸೆಂಬರ್ ಹಾಗೂ ನವೆಂಬರ್ 95ರಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರೂ, ಅರ್ಜಿದಾರರು ಮಂಡಳಿಯ ನಿಯಮಗಳನ್ನು ಪಾಲಿಸಿರುವುದು ಏಪ್ರಿಲ್ 98ರಲ್ಲಿ. ನಿಯಮಗಳ ಪ್ರಕಾರ ಕರಾರುಪತ್ರ ಇತ್ಯಾದಿಗಳನ್ನು ಸಲ್ಲಿಸಿದ ತಕ್ಷಣ ಕಾರ್ಯಾದೇಶಗಳನ್ನು ಏಪ್ರಿಲ್-96ರಲ್ಲೆ ಕೊಡಲಾಗಿದೆ. ಅಡವು ಗ್ರಾಮದಲ್ಲಿ ಯೋಜನೆಯ ಕೆಲಸಗಳು ಪ್ರಗತಿಯಲ್ಲಿದೆ. ಅನಜ ಗ್ರಾಮದಲ್ಲಿನ ಯೋಜನೆಯ ಕೊಳವೆ ಬಾವಿಯು ನಿಶ್ಫ್ರಿಯವಾಗಿದ್ದು, ಎರಡನೇ ಬಾರಿ ಬಾವಿಯನ್ನು ಕೊರೆಸಲಾಗಿ, ಈಗ ಫಲಕಾರಿಯಾಗಿದೆ. ಆದರೆ ಬೆಳೆಗಳು ಬೆಳೆದು ನಿಂತಿರುವುದರಿಂದ ಅಲ್ಲಿಯ ಜನರ ತಕರಾರಿನಿಂದ ಈ ಬೆಳೆಗಳು ಕಟಾವು ಆದ ನಂತರ, ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಇನ್ನುಳಿದ 4 ಯೋಜನೆಗಳಾದ, ಎಮ್ಮಿಗನೂರು, ಬುರಡಿಕಟ್ಟಿ, ಕಮಲಾಪುರ, ಚಿಕ್ಕೆರೂರುಗಳಿಗೆ ಅರ್ಜಿಗಳನ್ನು ಜನವರಿ-97 ರಿಂದ ಜುಲೈ-97ರಲ್ಲಿ ಸಲ್ಲಿಸಿದ್ದು, ಅವುಗಳಿಗೂ ಸಹ ಅರ್ಜಿದಾರರು ಫೆಬ್ರವರಿ ಹಾಗೂ ಏಪ್ರಿಲ್ 1998ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಏಪ್ರಿಲ್ 98ರಲ್ಲಿ ಕಾರ್ಯಾದೇಶವನ್ನು ನೀಡಿ ಕೆಲಸಗಳನ್ನು ಕೈಗೊಳ್ಳಲಾಗಿದ್ದು, ಪ್ರಗತಿಯಲ್ಲಿದೆ.

ಮಡ್ಲೂರ:- ಈ ಯೋಜನೆಗೂ ಸಹ ಸೆಪ್ಟೆಂಬರ್-96 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೂ, ಮಂಡಳಿಯ ನಿಯಮಗಳನ್ನು ಏಪ್ರಿಲ್ 98ರಲ್ಲಿ ಪಾಲಿಸಲಾಗಿದ್ದು, ಕಾರ್ಯಾದೇಶವನ್ನು ನೀಡಲಾಗಿದ್ದು, ಕೆಲಸಗಳನ್ನು ಕೈಗೊಳ್ಳಲಾಗಿದೆ.

ಹಿರೇಬೂದಿಹಾಳ, ಹಾದಿಹಳ್ಳಿ, ಹಾಜಿನಕೊಪ್ಪ, ಎಡಗೋಡಗಳಲ್ಲಿ ಏಪ್ರಿಲ್-97 ನಂತರದಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಅವುಗಳಿಗೂ ಸಹ ಅರ್ಜಿದಾರರು ಏಪ್ರಿಲ್-98 ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಇವುಗಳಿಗೂ ಸಹ ಕಾರ್ಯಾದೇಶಗಳನ್ನು ನೀಡಲಾಗಿದೆ. ಕೆಲಸಗಳನ್ನು ತ್ವರಿತವಾಗಿ ಕೈಗೊಳ್ಳಲಾಗುವುದು. ಎಂ.ಕೆ.ಯತ್ನಳ್ಳಿಗೆ ಅಕ್ಟೋಬರ್- 1998ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಅದೇ ತಿಂಗಳಿನಲ್ಲಿಯೇ ಕಾರ್ಯಾದೇಶವನ್ನು ನೀಡಲಾಗಿದೆ. ಕೆಲಸವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಇನ್ನೂ 8 ಗ್ರಾಮಗಳಿಗೆ ಕುಡಿಯುವ ನೀರಿನ ಯೊಜನೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದು, ಈ ಯೋಜನೆಗಳಿಗೂ ಸಹ ಮಂಡಳಿಯು ವಿದ್ಯುತ್ತನ್ನು ಮಂಜೂರು ಮಾಡಿದ್ದು, ಅಂದಾಜುಪಟ್ಟಿಗಳನ್ನು ತಯಾರಿಸಲಾಗಿದ್ದು, ಅರ್ಜಿದಾರರು ಮಂಡಳಿಯ ನಿಯಮಗಳನ್ನು ಪಾಲಿಸಿರುವುದಿಲ್ಲ. ಮಂಡಳಿಯು, ಪಿ.ಹೆಚ್.ಇ. ಹಾಗೂ ವಿಶ್ವಬ್ಯಾಂಕ್ ನೆರವಿನ ಯೋಜನೆಗಳಿಗೆ ಹಾಗೂ ಇತರೆ ಕುಡಿಯುವ ನೀರಿನ ಯೋಜನೆಗಳಿಗೆ ಮಂಡಳಿಯ ನಿಯಮಗಳನ್ನು ಅರ್ಜಿದಾರರು ಪಾಲಿಸದಿದ್ದರೂ, ಕೆಲಸಗಳನ್ನು ಕೈಗೊಳ್ಳಬೇಕೆಂದು ಮಂಡಳಿಯು ತನ್ನ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದೆ.

ಪ್ರಸ್ತುತ ಸಾಮಗ್ರಿಗಳು ಲಭ್ಯವಿದ್ದು, ಈ ಕೆಲಸಗಳಿಗಾಗಿ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು, ಕುಡಿಯುವ ನೀರಿನ ಯೋಜನೆಯ ಕೆಲಸಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು ತ್ವರಿತವಾಗಿ ಮುಗಿಸಲಾಗುವುದು.

ಹಾವೇರಿ ಜಿಲ್ಲೆಯಲ್ಲಿ 98-99ನೇ ಅಬಕಾರಿ ಹರಾಜು

2949:(4007)